ಮಾತ್ರ ಭಾರೀ ಒದ್ದಾಡಿಬಿಟ್ಟಿದ್ದೆ! ಪ್ರಾಣ ಹೋಗುವುದಕ್ಕೆ ಕೆಲವೇ ಕೆಲವು ಕ್ಷಣಗಳ ಮುಂಚೆ ಸಣ್ಣಸಣ್ಣ ಓವಲ್ ಅಥವಾ ಅಂಡಾಕಾರದ ಕಾಮನಬಿಲ್ಲಿನ ಬಣ್ಣಗಳ ಮಿಶ್ರಣವಿದ್ದ ನೂರಾರು ವಸ್ತುಗಳು ಸ್ವರ್ಗದಿಂದ ಬಂದಂತೆ ಬಂದು ನನ್ನ ಕಣ್ಣುಗಳ ಮುಂದೆ ಹಾರಾಡತೊಡಗಿದ್ದವು. ಅವು ಯಾವುದೊ ಪ್ರಪಂಚದ ಅಥವಾ ಬ್ರಹ್ಮಾಂಡದಿಂದ ಇಳಿದು ಬರುವ ಹಕ್ಕಿಗಳಂತೆ ತೇಲಾಡುತ್ತ ನಿಧಾನವಾಗಿ ನನ್ನ ಪ್ರಾಣಪಕ್ಷಿ ಹಾರಿಹೋದಂತೆ ಅವೂ ಕೂಡ ದೂರ ದೂರ ಹಾರಿ ಹೋಗಿದ್ದವು. ನನ್ನ ದೇಹದಿಂದ ಜಾರಿಕೊಂಡ ಪ್ರಾಣವಾಯು ಇಲ್ಲಿ ಗೋಡೆಯ ಮೇಲೆ ಕುಳಿತಿದ್ದರೂ ಏನೋ ಒಂದು ರೀತಿಯ ತಳಮಳ ಮತ್ತು ಆಘಾತದಿಂದ ನರಳುತ್ತಿರುವಂತೆ ಕಾಣಿಸುತ್ತಿದೆ.

* * *

ಕಾಲದ ಜೊತೆಗೆ ಬದುಕು ತನಗೆ ತಾನೇ ನಡೆಯುತ್ತಾ ಹೋಗುತ್ತದೆ. ಕೆಲವೊಮ್ಮೆ ಎಲ್ಲವೂ ನಾವು ನಡೆದಂತೆಯೆ ನಡೆಯುತ್ತಿದೆ ಎನಿಸುತ್ತದೆ. ಆದರೆ ಹಠಾತ್ತನೆ ಅದು ಯಾವುದೋ ತಿರುವಿನಲ್ಲಿ ನಿಂತು ತೊಂದರೆಗೆ ಸಿಲುಕಿ ಕೊಂಡಿರುತ್ತದೆ. ಅಲ್ಲಿ ಹರಿಯುವ ನದಿಯಂತೆ ಕಣ್ಣೀರು, ಆಲಿ ಕಲ್ಲುಗಳಾಗಿ ಬೀಳುವಂತ ಏಟುಗಳು; ದೇವರು ನಿಜವಾಗಿ ಇದ್ದಾನೆಯೆ ಇದ್ದರೆ ನನ್ನಂತಹ ಒಳ್ಳೆಯವನಿಗೆ ಹೀಗೇಕೆ ನಡೆಯುತ್ತಿದೆ? ಎನಿಸುತ್ತದೆ. ಒಂದೂ ಅರ್ಥವಾಗುವುದಿಲ್ಲ. ಮತ್ತೆ ಅದು ತನಗೆ ತಾನೇ ಮುನ್ನಡೆದಿರುತ್ತದೆ. ಇದನ್ನೆಲ್ಲ ಹೆಚ್ಚಾಗಿ ಓದಿ ಪ್ರಪಂಚವನ್ನೆಲ್ಲ ಸುತ್ತಿ ಎಲ್ಲವನ್ನು ನೋಡಿದವರಿಗಿಂತ ಹಳ್ಳಿಯ ಜನರು ಬದುಕನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿರುತ್ತಾರೆ. ಅವರು ಬದುಕು ಹೇಗೆ ಬರುತ್ತದೋ ಹಾಗೆಯೇ ಸ್ವೀಕರಿಸುತ್ತಾರೆ. ಕಳೆದ ಹದಿನೈದು ವರ್ಷಗಳಿಂದ ಹಳ್ಳಿ ಮತ್ತು ಸುತ್ತಮುತ್ತಲ ಹಳ್ಳಿಗಳ ಜನರ ಒಡನಾಟದಿಂದ ನನಗೆ ಚೆನ್ನಾಗಿ ಅರ್ಥವಾಗಿದೆ. ಅದೆಲ್ಲ ಈಗ ಒಂದು ಕಡೆಗಿರಲಿ.

ನನ್ನ ಕಥೆಯನ್ನು ಈಗ ಎಲ್ಲಿಂದ ಪ್ರಾರಂಭಿಸಬೇಕೊ ನನಗೆ ಅರ್ಥವಾಗುತ್ತಿಲ್ಲ. ಜೊತೆಗೆ ನನ್ನ ತಲೆಯೂ ಸರಿಯಾಗಿ ಓಡುತ್ತಿಲ್ಲ. ವ್ಯಾಸ ಮಹಾಋಷಿಗಳು ಮಹಾಭಾರತವನ್ನು ಗಣಪತಿಗೆ ಬರೆದುಕೊಳ್ಳುವಂತೆ ಹೇಳಿ ಜೊತೆಗೆ ಒಂದು ಷರತ್ತು ಹಾಕಿದ್ದರಂತೆ. ನಾನು ಕಥೆ ಹೇಳುವಾಗ ಎರಡನೇ ಸಲ ಕೇಳಬಾರದು. ಜೊತೆಗೆ ಕಥೆ ಬರೆಯುವುದನ್ನು ಎಲ್ಲಿಯೂ ನಿಲ್ಲಿಸಬಾರದು ಎಂದು. ನನ್ನ ಕಥೆಯನ್ನು ನೀವು ಓದಲೇಬೇಕಿದೆ. ಯಾಕೆಂದರೆ ನನ್ನ ದೇಹ ಸತ್ತು ಬಿದ್ದಿದ್ದು ಅದರ ಎದುರಿಗೆ ನನ್ನ ಆತ್ಮವೊ ಪ್ರೇತಾತ್ಮವೊ ಕುಳಿತುಕೊಂಡಿದೆ. ಇದಕ್ಕೆ ಕಥೆ ಹೇಳುವ ಶಕ್ತಿ ಎಷ್ಟೊತ್ತು ಇರುತ್ತದೊ ಗೊತ್ತಿಲ್ಲ. ಬಹುಶಃ ನನ್ನ ದೇಹವನ್ನು ತೆಗೆದುಕೊಂಡೋಗಿ ಎಲ್ಲಿ ಸಮಾಧಿ ಮಾಡುತ್ತಾರೊ ಅದು ಕೂಡ ನನಗೆ ಇನ್ನೂ ಗೊತ್ತಿಲ್ಲ. ನನ್ನ ಪತ್ನಿಗೆ `ಇದೇ ಫಾರ್ಮ್‌ಹೌಸ್‌ನಲ್ಲಿಯೇ ನಮ್ಮಿಬ್ಬರನ್ನು ಸಮಾಧಿ ಮಾಡಿದರೆ ಹೇಗಿರುತ್ತದೆ?' ಎಂದು ಹಲವು ಸಲ ಕೇಳಿದ್ದೆ. ಆದರೆ ಆಕೆ ಪ್ರತಿ ಸಲವೂ 'ರೀ ಸುಮ್ಮನೆ ಇರ್ರೀ ಆಗೆಲ್ಲ ಮಾತನಾಡಬೇಡಿ' ಎಂದು ನನ್ನ ಬಾಯಿ ಮುಚ್ಚಿಸುತ್ತಿದ್ದಳು. ಈಗ ಏನು ಮಾಡುತ್ತಾಳೊ ನೋಡಬೇಕು. ದೆವ್ವಗಳೆಂದರೆ ತೀರಾ ಹೆದರಿಕೊಳ್ಳುವ ಆಕೆ ನನ್ನನ್ನು ಫಾರ್ಮ್‌ಹೌಸ್‌ನಲ್ಲಿ ಸಮಾಧಿ ಮಾಡಲು ಬಿಡುವುದಿಲ್ಲ ಎನಿಸುತ್ತದೆ.

* * *

ಎರಡು ಎಕರೆಯ ಫಾರ್ಮ್‌ಹೌಸ್‌ನಲ್ಲಿ ಸಣ್ಣ ಮನೆ ಕಟ್ಟಿಕೊಂಡು ಸಿಕ್ಕಸಿಕ್ಕ ಮರಗಿಡಗಳನ್ನೆಲ್ಲ ಬೆಳೆಸಿಬಿಟ್ಟಿದ್ದೇನೆ. ಪಕ್ಕದಲ್ಲಿಯೇ ನನ್ನ ತಮ್ಮನಿಗೂ ಎರಡೆಕರೆ ಫಾರ್ಮ್‌ಹೌಸ್ ಮಾಡಿಕೊಟ್ಟಿದ್ದೇನೆ. ನೆಲಕ್ಕೆ ಹಾಕಿದ ಎಲ್ಲ ಮರ ಗಿಡಗಳು ಬೇಗ ಬೇಗನೆ ಬೆಳೆದು ಹೇರಳ ನೆರಳು ಚೆಲ್ಲುತ್ತ ತಂಪಾಗಿ ಸೊಂಪಾಗಿ ಬೆಳೆದು ನಿಂತುಕೊಂಡಿದ್ದವು. ಬಿಸಿಲಿನಿಂದ ಫಾರ್ಮ್‌ಹೌಸ್ ಒಳಗೆ ಬಂದರೆ ಸಾಕು ಮರ ಗಿಡಗಳು ತಣ್ಣನೆ ಗಾಳಿ ಬೀಸಿ ಕ್ಷಣಗಳಲ್ಲಿ ದೇಹ ಮನಸ್ಸುಗಳೆರಡನ್ನು ತಂಪಾಗಿಸಿ ಬಿಡುತ್ತಿದ್ದವು. ಹೊಂಗೆ, ಬೇವು, ತೆಂಗಿನ ಮರಗಳೊಂದಿಗೆ ಪಪ್ಪಾಯಿ, ಸಪೋಟ, ಸೀಬೆ, ನಿಂಬೆ ಗಿಡಗಳನ್ನು ಬೆಳೆಸಲಾಗಿತ್ತು. ಜೊತೆಗೆ ಹಲವು ರೀತಿಯ ಹೂಗಿಡಗಳನ್ನು ಬೆಳೆಸಿದ್ದೆವು. ಮಲ್ಲಿಗೆ ಗಿಡಗಳಲ್ಲಿ ಬಿಡುತ್ತಿದ್ದ ಹೂವುಗಳನ್ನು ಸಾವಿತ್ರಿ ಹೆಣ್ಣು ಮಕ್ಕಳಿಗೆಲ್ಲ ಕೊಡುತ್ತಿದ್ದಳು. ನಮ್ಮ ಮಾವನ ಮನೆಯಲ್ಲಿ ಇದ್ದಂತೆ ಎರಡು ಸಂಪಿಗೆ ಮರಗಳನ್ನು ಬೆಳೆಸಿದ್ದೆ. ಬೆಳಗ್ಗೆ ಸಾಯಂಕಾಲ ಗಮ್ಮನೆ ಸುವಾಸನೆ ಸುತ್ತಲಿನ ಗಾಳಿಯಲ್ಲಿ ಹರಡಿಕೊಳ್ಳುತ್ತಿತ್ತು. ನನ್ನ ತಮ್ಮ ಬರೀ ಮಾವು, ತೆಂಗು ಮತ್ತು ಸಪೋಟ ಗಿಡಗಳನ್ನು ಮಾತ್ರ ಹಾಕಿಕೊಂಡಿದ್ದ. ಎಲ್ಲದಕ್ಕಿಂತ ಹೆಚ್ಚಾಗಿ ನೀರಿದ್ದ ಒಂದು ಕೊಳವೆ ಬಾವಿಯೂ ಇತ್ತು. ಋತುಗಳಿಗೆ ತಕ್ಕ ಹಾಗೆ ತರಕಾರಿ ಸೊಪ್ಪುಗಳನ್ನೆಲ್ಲ ನಾರಾಯಣ ಮತ್ತು ಲಕ್ಷ್ಮೀ ಬೆಳೆಸುತ್ತಿದ್ದರು. ಒಟ್ಟಿನಲ್ಲಿ ಮಹಾನಗರ ಬೆಂಗಳೂರಿನ ಜನಜಂಗುಳಿ ಮತ್ತು ಪರಿಸರ ಮಾಲಿನ್ಯದಿಂದ ಬಳಲುತ್ತಿದ್ದ ನಾನು ಮತ್ತು ಸಾವಿತ್ರಿ ಆಗಾಗ ಇಲ್ಲಿಗೆ ಬಂದು ಗಿಡಗಳ ಮಧ್ಯೆ ತಲೆ ಮರೆಸಿಕೊಳ್ಳುತ್ತಿದ್ದೆವು.

ನನ್ನ ಪತ್ನಿ ತನ್ನ ಮಗನ ಜೊತೆಗೆ ಇಲ್ಲ, ಮಗಳ ಜೊತೆಗೆ ಹೋಗಿ ಅಮೆರಿಕಾದಲ್ಲಿ ಇರುತ್ತಾಳೊ? ಇಲ್ಲ ಬೆಂಗಳೂರಿನಲ್ಲಿರುವ ಮನೆಯಲ್ಲೆ ಇದ್ದು ಬಿಡುತ್ತಾಳೊ ಗೊತ್ತಿಲ್ಲ. ಮಗ ಅಥವಾ ಮಗಳು ಸಾವಿತ್ರಿಗೆ ಆಸರೆಯಾಗಬಹುದು? ಇನ್ನು ಮಗಳ ಗಂಡ ಮತ್ತು ಮಗನ ಹೆಂಡತಿ ಇಬ್ಬರೂ ಬೇರೆ ದೇಶ ಮತ್ತು ಸಂಸ್ಕೃತಿಗಳಿಗೆ ಸೇರಿದವರು. ನನ್ನ ಪತ್ನಿ ಆಗಾಗ 'ನಾನು ನಿಮಗಿಂತ ಮೊದಲು ಸತ್ತೋದರೆ ಚೆನ್ನಾಗಿರುತ್ತದೆ' ಎನ್ನುತ್ತಿದ್ದಳು. ಈಗ ಪಾಪ! ಒಂಟಿಯಾಗಿ ಹೇಗೆ ಬದುಕುತ್ತಾಳೊ ಗೊತ್ತಿಲ್ಲ. ಬಹುಶಃ ಇವಳು ಯಾರ ಜೊತೆಗೂ ಹೋಗದೆ ಇದೇ ಫಾರ್ಮ್‌ಹೌಸ್‌ನಲ್ಲಿ ಲಕ್ಷ್ಮೀಯ ಜೊತೆಗೆ ಬದುಕು ಸಾಗಿಸಬಹುದು? ಲಕ್ಷ್ಮೀ ಮತ್ತು ನಾರಾಯಣ ಇಬ್ಬರೂ ಒಳ್ಳೆಯವರೆ. ನನ್ನ ಮಗ ಮತ್ತು ಮಗಳು ಅಷ್ಟು ದೂರದಿಂದ ಬಂದು ನನ್ನ ಹೆಣವನ್ನು ನೋಡುವ ಯಾವ ಗ್ಯಾರಂಟಿಯೂ ಉಳಿದಿಲ್ಲ. ಅಷ್ಟು ಬೇಗನೆ ಅವರು ಬರಲು ಸಾಧ್ಯವಿಲ್ಲ. ಅವರಿಬ್ಬರಿಗಾಗಿ ನಾನು ಮತ್ತು ಸಾವಿತ್ರಿ ಏನೆಲ್ಲ ಪಡಿಪಾಟಲು ಅನುಭವಿಸಿರಬಹುದು? ತಿಳಿದುಕೊಂಡರೆ ಈಗಲೂ ನನ್ನ ಆತ್ಮ ಚಿಲ್ಲನಾಗುತ್ತದೆ. ಅದೆಲ್ಲ ಒಬ್ಬ ತಾಯಿ ತಂದೆಯ ಜವಾಬ್ದಾರಿ. ನಾವು ಮಾಡಿದ್ದು ಅಷ್ಟೇ ಅಲ್ಲವೆ? ಇನ್ನು ನನ್ನ ಪತ್ನಿ ಬದುಕಿರುವವರೆಗೂ ನನಗೆ ದೊರಕುತ್ತಿದ್ದ ಪಿಂಚಣಿಯಲ್ಲಿ ಕನಿಷ್ಠ ಅರ್ಧವಾದರೂ ದೊರಕುವುದರಿಂದ ಅವಳ ಬದುಕಿಗೆ ತೊಂದರೆ ಏನೂ ಇರುವುದಿಲ್ಲ. ಇರುವ ಸಮಸ್ಯೆ ಎಂದರೆ ಒಬ್ಬಳೇ ಈ ವಯಸ್ಸಿನಲ್ಲಿ ಹೇಗಿರುತ್ತಾಳೆ ಎನ್ನುವುದು?

* * *

ಈಗ ನಿಮಗೆ ಹೇಳುವ ಕಥೆ ನನ್ನ ತಲೆಯಲ್ಲಿ ಬಹಳ ವರ್ಷಗಳಿಂದಲೂ ಹುಳುವಿನಂತೆ ಕೊರೆಯುತ್ತಲೇ ಕುಳಿತಿತ್ತು. ಈ ಕಥೆಯನ್ನು ಸಾಯುವ ಮುಂಚೆ ಬರೆದಿಟ್ಟು, ಸತ್ತೋದ ಮೇಲೆ ಪ್ರಕಟಿಸುವಂತೆ ಯಾರಿಗಾದರೂ ಪ್ರಕಾಶಕರಿಗೆ ಕೊಡಬೇಕೆಂದುಕೊಂಡಿದ್ದೆ. ಆದರೆ ನನ್ನ ಅಸಲಿ ಕಥೆಯನ್ನು ಬರೆಯುವ ಧೈರ್ಯ ನನಗೆ ಬದುಕಿದ್ದಾಗ ಬರಲಿಲ್ಲ. ಆ ಕಥೆಯ ಗುಂಗಿನಲ್ಲೇ ಏನೇನೋ ಕಾಯಿಲೆಗಳು ನನ್ನನ್ನ ಅಮರಿಕೊಂಡಿದ್ದವು ಕೂಡ. ಅರವತ್ತು ವರ್ಷಗಳವರೆಗೂ ಕೆಲಸ, ಕೆಲಸ ಎಂದು ಕೆಲಸಕ್ಕೆ ಅಂಟಿಕೊಂಡುಬಿಟ್ಟಿದ್ದೆ. ಕೆಲಸದಿಂದ ನಿವೃತ್ತಿ ಆದ ಮೇಲೂ ಆ ಕಥೆ ಬರೆಯುವ ಸಾಹಸಕ್ಕೆ ಕೈ ಹಾಕಲಿಲ್ಲ. ಈ ಕಥೆ ಒಬ್ಬ ಮನುಷ್ಯನ ಪೂರ್ವಾಪರ **Genetical instinct and generation gaps** ಅಥವಾ ತಲೆಮಾರುಗಳ ಅಂತರದ ನಡುವೆ ನಡೆಯುವ ಕಥೆಯಾಗಿದೆ. ಪ್ರಪಂಚದಲ್ಲಿ ಮನುಷ್ಯನ ನಾಗರಿಕತೆ ಎನ್ನುವುದು ಉತ್ತಂಗ




## ಪಾಠ

ಹುಡಿಯಾಗುವ ಹುತ್ತವ
ಮತ್ತೆ ಮತ್ತೆ ಹೊಸೆಯುತ್ತಿತ್ತು
ಗೆದ್ದಲು.
ಅದನ್ನು ನೋಡು ನೋಡುತ್ತಾ
ಅವಳು ಬದುಕನ್ನು
ಗೆದ್ದಳು.

★ ಭಾಸ್ಕರ ಕೆ. ಕುಂಟಪದವು